ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ನಂ: ಬಿಸಿಯು/ವಿ.ಶಾ/ಸ್ನಾ.ವೇಳಾ / /2022-23/ ದಿನಾಂಕ:10.10.2022

## ಪರಿಷ್ಕೃತ ಅಂತಿಮ ಸುತ್ತೋಲೆ

**ವಿಷಯ:** 2022–23 ನೇ ಶೈಕ್ಷಣಿಕ ಸಾಲಿನ ಪ್ರಥಮ ಸೆಮಿಸ್ಟರ್ ಸ್ನಾತಕ ಪದವಿಗಳ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** 1.ಸರ್ಕಾರದ ಆದೇಶ ಸಂಖ್ಯೆ:ಇಡಿ/217/ಯು.ಎನ್.ಇ/2022 ಬೆಂಗಳೂರು, ದಿನಾಂಕ:17.08.2022
2. ದ್ವಿತೀಯ ಪಿ.ಯು.ಸಿ ಪೂರಕ ಪರೀಕ್ಷೆಯ ಫಲಿತಾಂಶ ದಿನಾಂಕ:12.09.2022
3. ಬಿ.ಸಿ.ಯು/ಶೈಕ್ಷಣಿಕ/ವೇಳಾಪಟ್ಟಿ/718/2022–23 ದಿನಾಂಕ:18.08.2022
4. ಬಿ.ಸಿ.ಯು/ಶೈಕ್ಷಣಿಕ/ವೇಳಾಪಟ್ಟಿ/801/2022–23 ದಿನಾಂಕ:16.09.2022
5. ಬಿ.ಸಿ.ಯು/ಶೈಕ್ಷಣಿಕ/ವೇಳಾಪಟ್ಟಿ/801/2022–23 ದಿನಾಂಕ: 20.09.2022
6. ನಂ: ಬಿಸಿಯು/ವಿ.ಶಾ/ಸ್ನಾ.ವೇಳಾ / /2022-23 ದಿನಾಂಕ: 27.09.2022
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10.10.2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸ್ನಾತಕ ಪದವಿ ಕಾಲೇಜುಗಳಿಗೆ ಅನ್ವಯಿಸುವಂತೆ, ಉಲ್ಲೇಖ–3,4,5 ಮತ್ತು 6ರ ಪ್ರಕಾರ ವಿಶ್ವವಿದ್ಯಾನಿಲಯದ ಪರಿಷ್ಕೃತ ಸುತ್ತೋಲೆಯಂತೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ನಾತಕ ಪದವಿಗಳ ಪ್ರಥಮ ಸೆಮಿಸ್ಟರ್ ಪ್ರವೇಶಾತಿಯ ಕೊನೆಯ ದಿನಾಂಕವನ್ನು 30.09.2022 ರ ವರೆಗೆ ಮರು ಆದೇಶಿಸಲಾಗಿತ್ತು.

ಮುಂದುವರೆದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ದಂಡ 1000/– ರೂಗಳ ಸಹಿತವಾಗಿ ಸ್ನಾತಕ ಪದವಿಗಳ ಪ್ರಥಮ ಸೆಮಿಸ್ಟರ್ ಪ್ರವೇಶಾತಿಗೆ **ಅಂತಿಮ ದಿನಾಂಕವನ್ನು 15.10.2022** ರವರೆಗೆ ಮರು ವಿಸ್ತರಿಸಿ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಅನ್ವಯ ಸ್ನಾತಕ ಪದವಿಗಳ ಪ್ರಥಮ ಸೆಮಿಸ್ಟರ್‌ಗಳು ತರಗತಿಗಳು **ದಿನಾಂಕ:01.09.2022** ರಿಂದ ಪ್ರಾರಂಭಗೊಂಡಿರುವುದರಿಂದ, ವಿದ್ಯಾರ್ಥಿಗಳ ಪ್ರವೇಶಾತಿಯ **ದಿನಾಂಕವನ್ನು 15.10.2022 ವರೆಗೆ ಪ್ರವೇಶ ನೀಡುವ ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆಯನ್ನು ನಿಗಧಿತ ಅವಧಿಯೊಳಗೆ ವಿಶೇಷ ತರಗತಿಗಳ ಉಪನ್ಯಾಸ ನೀಡುವುದರ ಮೂಲಕ ಪೂರ್ಣಗೊಳಿಸತಕ್ಕದು. ಅಂತಿಮ ದಿನಾಂಕ:15.10.2022 ರ ನಂತರ ಪ್ರವೇಶ ಕೇಳಿ ಬರುವ ವಿದ್ಯಾರ್ಥಿಗಳನ್ನು** ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಕಳುಹಿಸಿಕೊಡಬಾರದೆಂದು ಸ್ಪಷ್ಟಪಡಿಸಲಾಗಿದೆ.

**ಕುಲಸಚಿವರು**

**ಗೆ,**

1. ಪ್ರಾಂಶುಪಾಲರು,
ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು.

**ಪ್ರತಿಗಳು:**

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ.ಬೆಂಗಳೂರು.
2.ಡೀನರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3.ಸಂಯೋಜಕರು, ಯು.ಯು.ಸಿ.ಎಮ್.ಎಸ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಕಛೇರಿ ಪ್ರತಿ/ರಕ್ಷಾ ಕಡತ.
4. ಅಂತರ್ಜಾಲದ ಪ್ರತಿ.